

ಪ್ರಧಾನ ಕಾರಣಗಳಾಗಿರಬಹುದು. ಬಹುಕಾಲದ ಬಳಿಕ ಕೆಲವು ಅನುಕೂಲಗಳು ಲಭಿಸಿದ್ದರೂ, ಅಂತಹ ಪ್ರಯಾಣಗಳಿಂದಲೋ, ಹಣಕಾಸಿನ ಸ್ವಾತಂತ್ರ್ಯದಿಂದಲೋ ಮಹಿಳೆಯರು ಹಾದಿ ತಪ್ಪುತ್ತಾರೆ ಎಂದು ತೀರ್ಪು ಹೊರಡಿಸುವ ಮನೋಭಾವ ಗಮನಿಸಿದರೆ ಪರಿಸ್ಥಿತಿಯಲ್ಲೇನೂ ಬದಲಾವಣೆಯಾಗಿಲ್ಲ ಎನ್ನಿಸುತ್ತದೆ.

ಪ್ರವಾಸದ ಸಂದರ್ಭದಲ್ಲಿ ಅನೇಕ ಬಾರಿ, ಮಹಿಳೆಯ ಸುರಕ್ಷತೆಯನ್ನು ನೆಪ ಮಾಡಿ, ಆಕೆ ಏಕಾಂಗಿಯಾಗಿದ್ದಾಗ ಎದುರಿಸಬೇಕಾಗಿ ಬರಬಹುದಾದ ಸಮಸ್ಯೆಗಳ ಬೆಟ್ಟವನ್ನು ಆಕೆಯ ಮುಂದಿಡಲಾಗುತ್ತದೆ. ಯಾವಾಗ ಆಕೆಯು ಅದನ್ನು ನಿರಾಕರಿಸಿ, ‘ಇವುಗಳೆಲ್ಲ ಸಮಸ್ಯೆಗಳ ಬೆಟ್ಟಗಳಲ್ಲ. ಬದಲಾಗಿ, ಪುರುಷ ವಲಯವು ಮಾಡುವ ತಪ್ಪುಗಳು’ ಎಂದು (ಉದಾಹರಣೆಗೆ ದೌರ್ಜನ್ಯ, ಅತ್ಯಾಚಾರ ಮುಂತಾದ ಪುರುಷ ನಿರ್ಮಿತ ಸಮಸ್ಯೆಗಳು) ಪ್ರತಿಪಾದಿಸಲು ಆರಂಭಿಸುತ್ತಾಳೋ, ಆಗ ಆಕೆಯನ್ನೇ ನಿರಾಕರಿಸುವ ಪ್ರಯತ್ನಗಳು ನಡೆಯುತ್ತವೆ.

## ಅವಳ ದುಡಿಮೆ, ಆರ್ಥಿಕ ಸ್ವಾತಂತ್ರ್ಯ

ಮಹಾನಗರದ ಪದವಿ ಕಾಲೇಜಿನಲ್ಲಿ ಪಾಠ ಮಾಡುತ್ತಿದ್ದ ಪ್ರೊಫೆಸರ್ ಚಂದ್ರಕಲಾ, ತಮ್ಮ ಕಾಲೇಜಿನ ಎನ್‌ಎಸ್‌ಎಸ್ ಕ್ಯಾಂಪಿನ ಚಟುವಟಿಕೆಗಳು ಎಷ್ಟು ಅಚ್ಚುಕಟ್ಟಾಗಿ ನಡೆಯುತ್ತವೆ ಎಂಬ ವಿಷಯವಾಗಿ ಮಾತನಾಡುತ್ತಿದ್ದರು. ‘ನಮ್ಮ ಪದವಿ ಕಾಲೇಜಿನ ಎನ್‌ಎಸ್‌ಎಸ್ ಕ್ಯಾಂಪು ಬಹಳ ಚೆನ್ನಾಗಿರುತ್ತದೆ. ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ ತಮ್ಮಲ್ಲಿರುವ ಕೌಶಲವನ್ನು ಅರ್ಥ ಮಾಡಿಕೊಳ್ಳಲು, ತಮ್ಮ ನಾಯಕತ್ವದ ಸಾಮರ್ಥ್ಯವನ್ನು ಕಂಡುಕೊಳ್ಳಲು ಒಳ್ಳೆಯ ವೇದಿಕೆ ಇಲ್ಲಿ ಸಿಗುತ್ತದೆ. ಅವರು ಒಂದು ಪ್ರದೇಶದ ಕಸ ಸ್ವಚ್ಛ ಮಾಡುವುದು, ಮಣ್ಣನ್ನು ಎತ್ತಿ ಹಾಕುವುದು, ಮುಂತಾದ ದೈಹಿಕ ಶ್ರಮದ ಕೆಲಸಗಳಲ್ಲಿ ತೊಡಗಿಸಿಕೊಳ್ಳುತ್ತಾರೆ. ಆದರೆ ಅವರಿಗೆ ದೊರೆಯುವ ಕೆಲಸಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ, ಅಲ್ಲಿ ವಿದ್ಯಾರ್ಥಿಗಳಿಗೆ ಪೂರ್ವಗ್ರಹದಿಂದ ಕೂಡಿದ ಆದೇಶಗಳೇ ರೂಪುಗೊಳ್ಳುತ್ತವೆ. ಅಂದರೆ, ಕ್ಯಾಂಪ್‌ನಲ್ಲಿರುವ ವಿದ್ಯಾರ್ಥಿನಿಯರು ಕುಡಿಯುವ ನೀರು ಸಿದ್ಧಮಾಡಿ ಇಡುವ, ಅಂಗಳವನ್ನು ನೀಟಾಗಿ ಗುಡಿಸಿ ಸ್ವಚ್ಛವಾಗಿ ಇಡುವ, ವೇದಿಕೆಯ ಸುತ್ತಲೂ ರಂಗೋಲಿ ಹಾಕುವ ಕೆಲಸಗಳನ್ನೇ ಮಾಡಬೇಕಾಗುತ್ತದೆ. ಕ್ಯಾಂಪ್‌ನಲ್ಲಿ ವಿದ್ಯಾರ್ಥಿಗಳಿಗೆ ಗುಡಿಸುವಂತೆ ಮತ್ತು ರಂಗೋಲಿ ಹಾಕುವಂತೆ ಹೇಳಿದರೆ ಪ್ರತಿಕ್ರಿಯೆ ಸರಳವಾಗಿ ಇರುವುದಿಲ್ಲ. ಪದವಿಯವರೆಗೆ ಶಿಕ್ಷಣ ಪಡೆದು ಬಂದ ಮಕ್ಕಳನ್ನು ಹೇಗೋ ನಿಭಾಯಿಸಿದರೆ ಸಾಕಪ್ಪಾ ಎಂಬ ಮನಸ್ಥಿತಿಯಲ್ಲಿರುವ ಉಪನ್ಯಾಸಕರು ಕೂಡ, ಕೆಲಸದ ಹಂಚಿಕೆಯಲ್ಲಿ ಯಾವುದೇ ಬದಲಾವಣೆ ಮಾಡುವ ಉಸಾಬರಿಗೆ ಹೋಗದೆ, ಹೇಗೆ ನಡೆದುಕೊಂಡು ಹೋಗುತ್ತಿದೆಯೋ, ಹಾಗೆಯೇ ಸಾಗಲಪ್ಪಾ ಎಂದೇ ಭಾವಿಸಿ, ಆದೇಶಗಳನ್ನು ನೀಡುತ್ತಾರೆ’ ಎಂದರು.

ಬಹುಶಃ ಎಲ್ಲ ಕಾಲೇಜುಗಳಲ್ಲಿಯೂ ಎನ್‌ಎಸ್‌ಎಸ್ ಕ್ಯಾಂಪು ಮಾತ್ರವಲ್ಲ, ಯಾವುದೇ ಕೆಲಸಗಳ ಹಂಚಿಕೆಯಲ್ಲಿಯೂ ‘ಇದು ಹೆಣ್ಣು ಮಾಡುವ ಕೆಲಸ’ ಎಂಬ ಗ್ರಹಿಕೆಯೋ ಅಥವಾ ಹೆಣ್ಣೆಂದರೆ ಹೀಗಿರಬೇಕು ಎಂಬ ವ್ಯಾಖ್ಯೆಯೋ ಅಡಗಿರುತ್ತದೆ. ಇತ್ತೀಚೆಗಿನ ಕೆಲವು ದಶಕಗಳಲ್ಲಿ, ‘ಪುರುಷರು ಮಾಡುವ ಕೆಲಸಗಳು’ ಎಂದು ಯಾವುದನ್ನೆಲ್ಲ ಸಾಂಪ್ರದಾಯಿಕವಾಗಿ ಗುರುತಿಸಲಾಗಿದೆಯೋ, ಅಂತಹವುಗಳನ್ನು ಮಾಡಿ ‘ಶಹಬ್ಬಾಸ್’ ಅನ್ನಿಸಿಕೊಂಡ ಅನೇಕ ಉದಾಹರಣೆಗಳು ದೊರೆಯುತ್ತವೆ. ಆ ಬಗ್ಗೆ ಬಹಳಷ್ಟು ಪ್ರಚಾರವೂ ದೊರೆಯುತ್ತದೆ. ಅವಳು ಬೃಹತ್ ವಾಹನಗಳನ್ನು ಚಲಾಯಿಸಿದಾಗ, ಕೃಷಿಕಾಯಕದಲ್ಲಿ ದೈಹಿಕ ಶ್ರಮ ಹೆಚ್ಚಿರುವ ಕೆಲಸಗಳನ್ನು ಮಾಡಿದಾಗ, ಮೆಕಾನಿಕಲ್ ಕ್ಷೇತ್ರದಲ್ಲಿ ಮುಂದುವರೆದಾಗಲೆಲ್ಲ ಮಹಿಳೆಗೆ ಶ್ಲಾಘನೆ ವ್ಯಕ್ತವಾಗುತ್ತದೆ. ಆದರೆ ಮಹಿಳೆಯರು ಮಾಡುವ ಕೆಲಸಗಳನ್ನು ಪುರುಷರು